ಕರ್ನಾಟಕ ಸರ್ಕಾರ

ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಇಲಾಖೆ

# ಕರ್ನಾಟಕ ಸ್ಥಳೀಯ ಪ್ರಾಧಿಕಾರಗಳ (ರಾಜಭಾಷಾ) ಅಧಿನಿಯಮ, 1981

# THE KARNATAKA LOCAL AUTHORITIES (OFFICIAL LANGUAGE) ACT, 1981 (30 OF 1981)

ಕರ್ನಾಟಕ ಸರ್ಕಾರ

ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಇಲಾಖೆ

# ಕರ್ನಾಟಕ ಸ್ಥಳೀಯ ಪ್ರಾಧಿಕಾರಗಳ (ರಾಜಭಾಷಾ) ಅಧಿನಿಯಮ, 1981

# THE KARNATAKA LOCAL AUTHORITIES (OFFICIAL LANGUAGE) ACT, 1981 (30 OF 1981)

**ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವಾಲಯ**

**ಕ್ರಮಾಂಕ : ಲಾ 50 ಎಲ್‌ಎಂಪಿ 89,**

**ಬೆಂಗಳೂರು, ದಿನಾಂಕ: 20ನೇ ಅಕ್ಟೋಬರ್ 1989**

**ಅಧಿಸೂಚನೆ**

ಕರ್ನಾಟಕ ರಾಜಭಾಷಾ ಅಧಿನಿಯಮ, 1963 (1963 ರ ಕರ್ನಾಟಕ ಅಧಿನಿಯಮ 26)ರ 5–ಎ ಪ್ರಕರಣದಿಂದ ಪ್ರದತ್ತವಾದ ಅಧಿಕಾರಗಳನ್ನು ಚಲಾಯಿಸಿ ಕರ್ನಾಟಕ ರಾಜ್ಯಪಾಲನಾದ ಶ್ರೀ ಪಿ. ವೆಂಕಟಸುಬ್ಬಯ್ಯ ಎಂಬ ನಾನು, ಕರ್ನಾಟಕ ಸ್ಥಳೀಯ ಪ್ರಾಧಿಕಾರಗಳ (ರಾಜಭಾಷಾ) ಅಧಿನಿಯಮ, 1981 ಇದರ ಕನ್ನಡ ಭಾಷೆಯಲ್ಲಿರುವ ಈ ಮುಂದಿನ ಭಾಷಾಂತರವು ಸರ್ಕಾರಿ ರಾಜಪತ್ರದಲ್ಲಿ ಈ ಅಧಿಸೂಚನೆಯು ಪ್ರಕಟವಾದ ದಿನಾಂಕದಿಂದ ಪರಿಣಾಮಕಾರಿಯಾಗುವಂತೆ ಕನ್ನಡ ಭಾಷೆಯಲ್ಲಿ ಅದರ ಅಧಿಕೃತ ಪಾಠವಾಗಿರತಕ್ಕದ್ದೆಂದು ಈ ಮೂಲಕ ನಿರ್ದಿಷ್ಟಪಡಿಸುತ್ತೇನೆ.

**ಪಿ. ವೆಂಕಟಸುಬ್ಬಯ್ಯ**
**ಕರ್ನಾಟಕ ರಾಜ್ಯಪಾಲರು**

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ,

**ಅರ್ಜುನಪ್ಪ**
ಸರ್ಕಾರದ ಅಧೀನ ಕಾರ್ಯದರ್ಶಿ,
ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಇಲಾಖೆ.
(ಪ್ರಕಟಣೆಗಳು)

## ವಿಷಯಾನುಕ್ರಮಣಿಕೆ

1. ಚಿಕ್ಕ ಹೆಸರು
2. ಕನ್ನಡವು ಎಲ್ಲಾ ಸ್ಥಳೀಯ ಪ್ರಾಧಿಕಾರಗಳ ರಾಜಭಾಷೆಯಾಗಿರತಕ್ಕದ್ದು.

## ಕರ್ನಾಟಕ ಅಧಿನಿಯಮ 1981ರ ಸಂಖ್ಯೆ 30

**(1981ರ ಏಪ್ರಿಲ್ ಇಪ್ಪತ್ತನೇ ದಿವಸದಂದು ಕರ್ನಾಟಕ ರಾಜಪತ್ರದ ವಿಶೇಷ ಸಂಚಿಕೆಯಲ್ಲಿ ಮೊದಲು ಪ್ರಕಟವಾಯಿತು)**

## ಕರ್ನಾಟಕ ಸ್ಥಳೀಯ ಪ್ರಾಧಿಕಾರಗಳ (ರಾಜಭಾಷಾ) ಅಧಿನಿಯಮ, 1981

(1981ರ ಏಪ್ರಿಲ್ ಹದಿನೈದನೇ ದಿವಸದಂದು ರಾಜ್ಯಪಾಲರ ಅನುಮತಿಯನ್ನು ಪಡೆಯಿತು.)

ಕರ್ನಾಟಕ ರಾಜ್ಯದಲ್ಲಿನ ಎಲ್ಲಾ ಸ್ಥಳೀಯ ಪ್ರಾಧಿಕಾರಗಳು ಕನ್ನಡವನ್ನು ಅಧಿಕೃತ ಉದ್ದೇಶಗಳಿಗಾಗಿ ಉಪಯೋಗಿಸಬೇಕಾದ ಭಾಷೆ ಎಂದು ಅಂಗೀಕರಿಸುವುದಕ್ಕಾಗಿ ಉಪಬಂಧಿಸುವ ಅಧಿನಿಯಮ.

ಕರ್ನಾಟಕ ಅಧಿನಿಯಮ 1963ರ 26ರ ಮೂಲಕ ಕನ್ನಡವನ್ನು ರಾಜ್ಯದ ರಾಜಭಾಷೆಯೆಂದು ಘೋಷಿಸಿರುವುದರಿಂದ;

1980ರ ಮಾರ್ಚ್ 4ನೇ ದಿನಾಂಕದ ಸಂಖ್ಯೆ ಡಿಪಿಎಆರ್ 29 ಪಿಓಎಲ್ 79ನೇ ಅಧಿಸೂಚನೆಯ ಮೂಲಕ, ಕರ್ನಾಟಕ ಸರ್ಕಾರವು, ರಾಜ್ಯದಾದ್ಯಂತ ಎಲ್ಲಾ ರಾಜ್ಯ ಸರ್ಕಾರದ ಕಚೇರಿಗಳು ಕನ್ನಡವನ್ನು ಎಲ್ಲಾ ಅಧಿಕೃತ ಉದ್ದೇಶಗಳಿಗಾಗಿ ಉಪಯೋಗಿಸತಕ್ಕದ್ದೆಂದು ಅಧಿಸೂಚಿಸಿರುವುದರಿಂದ;

ರಾಜ್ಯದಲ್ಲಿನ ಸ್ಥಳೀಯ ಪ್ರಾಧಿಕಾರಗಳು, ಕನ್ನಡವನ್ನು ಎಲ್ಲಾ ಅಧಿಕೃತ ಉದ್ದೇಶಗಳಿಗಾಗಿ ಉಪಯೋಗಿಸುವುದಕ್ಕಾಗಿ ಉಪಬಂಧಿಸುವುದು ವಿಹಿತವಾಗಿರುವುದರಿಂದ;

ಭಾರತ ಗಣರಾಜ್ಯದ ಮೂವತ್ತೆರಡನೇ ವರ್ಷದಲ್ಲಿ ಕರ್ನಾಟಕ ರಾಜ್ಯ ವಿಧಾನಮಂಡಲದಿಂದ ಈ ಕೆಳಕಂಡಂತೆ ಅಧಿನಿಯಮಿತವಾಗತಕ್ಕದ್ದು:-

**1. ಚಿಕ್ಕ ಹೆಸರು.-** ಈ ಅಧಿನಿಯಮವನ್ನು ಕರ್ನಾಟಕ ಸ್ಥಳೀಯ ಪ್ರಾಧಿಕಾರಗಳ (ರಾಜಭಾಷಾ) ಅಧಿನಿಯಮ, 1981 ಎಂದು ಕರೆಯತಕ್ಕದ್ದು.

**2. ಕನ್ನಡವು ಎಲ್ಲಾ ಸ್ಥಳೀಯ ಪ್ರಾಧಿಕಾರಗಳ ರಾಜಭಾಷೆಯಾಗಿರತಕ್ಕದ್ದು.-** ಕನ್ನಡವು ಕರ್ನಾಟಕ ರಾಜ್ಯದಲ್ಲಿನ ಎಲ್ಲ ಸ್ಥಳೀಯ ಪ್ರಾಧಿಕಾರಗಳ ರಾಜಭಾಷೆಯಾಗಿರತಕ್ಕದ್ದು.

ಪರಂತು,-

(ಎ) ಇಂಗ್ಲಿಷ್ ಭಾಷೆಯನ್ನು,-

(i) ಕೇಂದ್ರ ಸರ್ಕಾರದ ಕಚೇರಿಗಳಿಗೆ, ಇತರ ರಾಜ್ಯ ಸರ್ಕಾರಗಳ ಕಚೇರಿಗಳಿಗೆ ಮತ್ತು ಅಕೌಂಟೆಂಟ್ ಜನರಲ್ಲನಿಗೆ ಸಂಬೋಧಿಸಿದ;

(ii) ಯಾವುದೇ ಪ್ರಾಧಿಕಾರಕ್ಕೆ ಅಪೀಲು ಅಥವಾ ಪುನರೀಕ್ಷಣೆಗೆ ಒಳಪಟ್ಟಿರುವಂಥ ಯಾವುದೇ ಕಾನೂನಿನ ಮೇರೆಗೆ ಮಾಡಿದ ಆದೇಶಗಳಿಗೆ ಸಂಬಂಧಪಟ್ಟ;

(iii) ಗ್ರಾಮ ನ್ಯಾಯಾಲಯಗಳನ್ನು ಹೊರತುಪಡಿಸಿ ಇತರ ನ್ಯಾಯಾಲಯಗಳಿಗೆ ಸಂಬೋಧಿಸಿದ;

(iv) ಆಡಳಿತಾತ್ಮಕ ಕಾರಣಗಳಿಗಾಗಿ ಇಂಗ್ಲೀಷ್ ಭಾಷೆಯನ್ನು ಬಿಟ್ಟುಬಿಡುವುದು ಸಾಧ್ಯವಿಲ್ಲದಿರುವಲ್ಲಿನ ಅಥವಾ ಅಂಥ ಪತ್ರ ವ್ಯವಹಾರಗಳು ಕೇವಲ ತಾಂತ್ರಿಕ ಮತ್ತು ವೈಜ್ಞಾನಿಕ ಸ್ವರೂಪದ್ದಾಗಿರುವಲ್ಲಿನ,

– ಪತ್ರ ವ್ಯವಹಾರಗಳಲ್ಲಿ ಉಪಯೋಗಿಸಬಹುದು.

(ಬಿ) ಅಂಥ ಸ್ಥಳೀಯ ಪ್ರಾಧಿಕಾರದ ಕಾರ್ಯಾಚರಣೆಯ ಪ್ರದೇಶದೊಳಗಿನ ಭಾಷಾ ಅಲ್ಪ ಸಂಖ್ಯಾತರ ಜನಸಂಖ್ಯೆಯು ಶೇಕಡಾ ಹದಿನೈದಕ್ಕಿಂತ ಕಡಿಮೆ ಇಲ್ಲದಿದ್ದರೆ,–

(i) ಅರ್ಜಿಗಳನ್ನು ಅಂಥ ಅಲ್ಪಸಂಖ್ಯಾತರ ಭಾಷೆಯಲ್ಲಿ ಅಂಗೀಕರಿಸತಕ್ಕದ್ದು ಮತ್ತು ಸಾಧ್ಯವಾದಷ್ಟುಮಟ್ಟಿಗೆ ಅವುಗಳಿಗೆ ಉತ್ತರಗಳನ್ನು ಆ ಭಾಷೆಯಲ್ಲಿ ಕೊಡತಕ್ಕದ್ದು;

(ii) ಮಾಹಿತಿ ಕರಪತ್ರಗಳನ್ನು ಮತ್ತು ಪ್ರಚಾರ ಸಾಮಗ್ರಿಗಳನ್ನು ಸಹ ಅಂಥ ಅಲ್ಪಸಂಖ್ಯಾತರ ಭಾಷೆಯಲ್ಲಿ ಕೊಡತಕ್ಕದ್ದು;

(iii) ಸ್ಥಳೀಯ ಪ್ರಾಧಿಕಾರಗಳ ನೋಟೀಸುಗಳನ್ನು ಸಹ ಅಂಥ ಅಲ್ಪ ಸಂಖ್ಯಾತರ ಭಾಷೆಯಲ್ಲಿ ಪ್ರಕಟಿಸತಕ್ಕದ್ದು.

**ವಿವರಣೆ**: ಈ ಪ್ರಕರಣದಲ್ಲಿ "ಸ್ಥಳೀಯ ಪ್ರಾಧಿಕಾರ" ಎಂಬುದನ್ನು, ಸಂವಿಧಾನದ ಏಳನೇ ಅನುಸೂಚಿಯ–IIನೇ ಪಟ್ಟಿಯಲ್ಲಿ ನಮೂದಿಸಿದ ಯಾವುದೇ ವಿಷಯಕ್ಕೆ ಸಂಬಂಧಿಸಿದಂತೆ, ರಾಜ್ಯ ವಿಧಾನಮಂಡಲವು ಮಾಡಿದ ಕಾನೂನಿನ ಮೂಲಕ ಅಥವಾ ಅದರ ಮೇರೆಗೆ ಸ್ಥಾಪಿಸಲಾದ ಶಾಸನಬದ್ಧ ನಿಗಮವನ್ನು ಮತ್ತು ಕರ್ನಾಟಕ ಸಹಕಾರಿ ಸಂಘಗಳ ಅಧಿನಿಯಮ, 1959 (ಕರ್ನಾಟಕ ಅಧಿನಿಯಮ 1959ರ II)ರ ಮೇರೆಗೆ ನೋಂದಾಯಿತವಾದ ಸಹಕಾರಿ ಸಂಘವನ್ನು ಒಳಗೊಳ್ಳುತ್ತದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ,

**ಕೆ.ಆರ್. ಚಾಮಯ್ಯ,**
ಸರ್ಕಾರದ ಪ್ರಾರೂಪಕಾರ ಮತ್ತು ಪದನಿಮಿತ್ತ ವಿಶೇಷ ಕಾರ್ಯದರ್ಶಿ,
ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಇಲಾಖೆ.